ಓ.ಎಸ್.102/2018 ಡಿ.ಡಬ್ಲ್ಯೂ 1

ದಿನಾಂಕಃ **09.03.2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

## ಪಾಟೀಸವಾಲುಃ ವಾದಿಪರ ವಕೀಲರಾದ ಶ್ರೀ ಎಸ್ ಎನ್ ಕೆ ಅವರಿಂದ –

1. ನಾನು ಬಿ.ಎ ಪಧವೀಧರನಾಗಿದ್ದೇನೆ. 2 ರಿಂದ 6 ನೇ ಪ್ರತಿವಾದಿಗಳು ನನ್ನ ಸಂಬಂಧಿಕರ ಎಂಬ ಪ್ರಶ್ನೆಗೆ ನನ್ನ ಸಂಬಂಧಿಕರಲ್ಲ ಅವರು ನನ್ನ ಸ್ನೇಹಿತರು ಹಾಗೂ ಹಿತೈಷಿಗಳು ಎಂದು ಸಾಕ್ಷಿ ನುಡಿಯುತ್ತಾರೆ. ನನಗೆ ಹಾಗೂ 2 ರಿಂದ 6 ನೇ ಪ್ರತಿವಾದಿಗಳಿಗೆ 40 ವರ್ಷಗಳಿಂದ ಪರಿಚಯ. 2 ನೇ ಪ್ರತಿವಾದಿ ಊಟಿಯಲ್ಲಿ ವಾಸವಾಗಿದ್ದು 4 ನೇ ಪ್ರತಿವಾದಿ ಬೆಂಗಳೂರಿನಲ್ಲಿ 3,5 ಹಾಗೂ 6 ನೇ ಪ್ರತಿವಾದಿಗಳು ಮೈಸೂರಿನಲ್ಲಿ ವಾಸವಾಗಿದ್ದಾರೆ.

2. ನಾನು ಚಾಮುಂಡಿ ಕಾಫಿ ಕ್ಯೂರಿಂಗ್ ವರ್ಕ್ಸ್ ನಲ್ಲಿ ಕೆಲಸ ಮಾಡುತ್ತಿದ್ದೆ. ಆಗ 3 ನೇ ಪ್ರತಿವಾದಿ ಕೂಡ ಅಲ್ಲಿ ಆಢಳಿತಾಧಿಕಾರಿಯಾಗಿ ಇದ್ದರು ಅವರ ಕೈಕೆಳಗೆ ನಾನು ಕೆಲಸ ಮಾಡುತ್ತಿದ್ದೆ ಆದ್ದರಿಂದ ನನಗೆ ಅವರು ಪರಿಚಯ. ನಾನು 1978 ರಿಂದ 2018 ರವರೆಗೆ ಸದರಿ ಕಾಫಿ ಕ್ಯೂರಿಂಗ್ ವರ್ಕ್ಸ್ ನಲ್ಲಿ ಕೆಲಸ ಮಾಡುತ್ತಿದ್ದೆ. 3 ನೇ ಪ್ರತಿವಾದಿ ಈಗಲೂ ಸಹ ಅಲ್ಲಿ ಆಢಳಿತಾಧಿಕಾರಿಯಾಗಿದ್ದಾರೆ. ಸದರಿ ಕಂಪನಿಯಲ್ಲಿ ಅವರು ಡೈರೆಕ್ಟರ್ ಆಗಿರುತ್ತಾರೆ. 1978 ರಿಂದ 2018 ರವರೆಗೆ 3 ನೇ ಪ್ರತಿವಾದಿಯರ ಕಂಪನಿಯ ಹಾಗೂ ಎಲ್ಲಾ ವ್ಯವಹಾರಗಳನ್ನು ನಾನೇ ನೋಡಿಕೊಳ್ಳುತಿದ್ದೇನಾ ಎಂಬ ಪ್ರಶ್ನೆಗೆ ಕೆಲವೊಂದು ವ್ಯವಹಾರ ಮಾತ್ರ ನೊಡಿಕೊಳ್ಳುತ್ತಿದ್ದೆ ಎಂದು ಸಾಕ್ಷಿ ನುಡಿಯುತ್ತಾರೆ. ಕಂಪನಿಯೇ ಬೇರೆ ಹಾಗೂ ವಯಕ್ತಿಕ ವ್ಯವಹಾರವೇ ಬೇರೆ ಎಂದರೆ ಸರಿ. ಕಂಪನಿ ವ್ಯವಹಾರದಲ್ಲಿ ನನಗೆ ಸಂಬಂಧಪಟ್ಟ ಕೆಲಸ ಮಾತ್ರ ಮಾಡುತ್ತಿದ್ದೆ

3. 3 ನೇ ಪ್ರತಿವಾದಿಗೆ ಸಂಬಂಧಪಟ್ಟಂತೆ ಕೆಲವು ಜಮೀನುಗಳು ಇವೆ, ಅವುಗಳಿಗೆ ಸಂಬಂಧಪಟ್ಟ ವಯಕ್ತಿಕ ವ್ಯವಹಾರ ನಾನು ನೋಡಿಕೊಳ್ಳುತ್ತಿದ್ದೇನೆ. 2 ರಿಂದ 6 ನೇ ಪ್ರತಿವಾದಿಗಳು ಒಂದೇ ಕುಟುಂಬಕ್ಕೆ ಸೇರಿದವರು ಸಾಕ್ಷಿ ಮುಂದುವರಿದು ಅವರು ಚಿಕ್ಕಪ್ಪ-ದೊಡ್ಡಪ್ಪನ ಮಕ್ಕಳಾಗಿರುತ್ತಾರೆ ಎಂದು ನುಡಿಯುತ್ತಾರೆ. 2 ರಿಂದ 6 ನೇ ಪ್ರತಿವಾದಿಗಳವರೆಗೆ ಅವರ ವಯಕ್ತಿಕ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ಯಾವುದೇ ಜಮೀನು ಖರೀದಿ ಅಥವಾ ಮಾರಾಟ ನಾನು ಮಾಡಿಲ್ಲ. ಅದೇ ರೀತಿ ಸರಕಾರಿ ಕಛೇರಿಗಳಲ್ಲಿ ಸದರಿಯವರು ದಾಖಲಾತಿಗಳನ್ನು ಪಡೆಯಲು ಅಥವಾ ಬೇರೆ ಕೆಲಸಗಳಿಗೆ ನಿರ್ವಹಣೆ ನೀಡಿರುತ್ತಾರೆ. ಪ್ರಸ್ತುತ ದಾವೆಗೆ ಬಿಟ್ಟರೆ ಸದರಿಯವರು ನನಗೆ ಬೇರೆ ಯಾವುದೇ ಸರಕಾರಿ ಕಛೇರಿಗಳ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಕಾರ್ಯ ನಿರ್ವಹಿಸಲು ಹೇಳಿಲ್ಲ.

4. 3 ನೇ ಪ್ರತಿವಾದಿ ಈಗ ಅನಾರೋಗ್ಯದಿಂದ ಬಳಲುತ್ತಿದ್ದು, 1 ವರ್ಷದ ಹಿಂದೆ ಆಸ್ಪತ್ರೆ ಸೇರಿದ್ದು, ಶಸ್ತ್ರ ಚಿಕಿತ್ಸೆಯಾಗಿದ್ದು ಈಗ ಮನೆಯಲ್ಲಿ ಇದ್ದಾರೆ. 2 ನೇ ಪ್ರತಿವಾದಿ ಸಹ ತನ್ನ ಕೊನೆಯ ದಿನಗಳನ್ನು ಎಣಿಸುತ್ತಿದ್ದಾರೆ. 4 ನೇ ಪ್ರತಿವಾದಿ ಬೆಂಗಳೂರಿನಲ್ಲಿ ವಾಸವಾಗಿದ್ದು ಅವರಿಗೆ ಬರಲು ಆಗುವುದಿಲ್ಲ. 6 ನೇ ಪ್ರತಿವಾದಿಗೆ ನ್ಯಾಯಾಲಯಕ್ಕೆ ಬಂದುಹೋಗಿ ಅನುಭವ ಇರುವುದಿಲ್ಲ. 2 ಮತ್ತು 3 ನೇ ಪ್ರತಿವಾದಿಯರು ಅನಾರೋಗ್ಯದಿಂದ ಬಳಲುತ್ತಿದ್ದಾರೆ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ಇನ್ನೂ ಮುಂದೆ ಹಾಜರುಪಡಿಸುತ್ತೇನೆ.

5. ಸದರಿ ಮೇಲೆ ಹೇಳಿದ ಕಾರಣಗಳಿಂದಾಗಿ 2 ರಿಂದ 6 ನೇ ಪ್ರತಿವಾದಿಯರು ನನ್ನ ಹೆಸರಿಗೆ ಜಿ ಪಿ ಎ ಬರೆದುಕೊಟ್ಟಿರುತ್ತಾರೆ ಎಂದು ಸದರಿ ನಿಪಿ.1 ಜಿ ಪಿ ಎ ನಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಪ್ರತಿವಾದಿಯರು ಆರೋಗ್ಯವಾಗಿದ್ದು, ದೈಹಿಕವಾಗಿ ಮತ್ತು ಮಾನಸಿಕವಾಗಿ ಶಕ್ತರಾಗಿದ್ದಾರೆ ಎಂದರೆ ಸರಿಯಲ್ಲ. ಸದರಿಯವರು ನ್ಯಾಯಾಲಯಕ್ಕೆ ಬಂದರೆ ಸತ್ಯಾಂಶ ಹೊರಬರುತ್ತದೆ ಎಂದು ನನ್ನ ಹೆಸರಿಗೆ ಜಿ ಪಿ ಎ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

6. 2 ರಿಂದ 6 ನೇ ಪ್ರತಿವಾದಿಗಳಿಗೆ ಸಂಬಂಧಪಟ್ಟಂತೆ ನಾನು ಪ್ರಸ್ತುತ ದಾವೆ ಬಿಟ್ಟರೆ ಮಾನ್ಯ ಜಿಲ್ಲಾ ನ್ಯಾಯಾಲಯ ಹುಣಸೂರು ರಲ್ಲಿ ಕೂಡ ಜಿ.ಪಿ.ಎ ಪಡೆದಿರುತ್ತೇನೆ. 2 ರಿಂದ 6 ನೇ ಪ್ರತಿವಾದಿಗಳು ನ್ಯಾಯಾಲಯಕ್ಕೆ ಬಂದು ಹೇಳಿಕೆ ನೀಡಲು ತಪ್ಪಿಸಿಕೊಳ್ಳುವ ಸಲುವಾಗಿ ನನಗೆ ಏನು ಗೊತ್ತಿಲ್ಲದಿದ್ದರು ನನ್ನ ಹೆಸರಿಗೆ ಜಿ ಪಿ ಎ ನೀಡಿರುತ್ತಾರೆ ಎಂದರೆ ಸುಳ್ಳು.

7. ನಾನಾಗಲಿ ನನ್ನ ಕುಟುಂಬವಾಗಲಿ ದೊಡ್ಡ ಕಾಡನಹಳ್ಳಿಯಲ್ಲಿ ವಾಸವಾಗಿಲ್ಲ ಅಲ್ಲಿ 2 ರಿಂದ 6 ನೇ ಪ್ರತಿವಾದಿಗಳ ಗೆಸ್ಟ್ ಹೌಸ್ ಇದೆ. ದೊಡ್ಡ-ಕಾಡನಹಳ್ಳಿಯ ಸರ್ವೇ ನಂ.85/1 ಮತ್ತು 88/1 ಕ್ಕೆ ಸಂಬಂಧಪಟ್ಟ ಮೂಲ ಮಾಲೀಕರು ಮುದಿನಂಜೇಗೌಡ ಆಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮುದಿನಂಜೇಗೌಡ ಅವರ ವಂಶಸ್ಥರು ಯಾರು ನನಗೆ ಗೊತ್ತಿಲ್ಲ. ಸದರಿ ವಿಚಾರವನ್ನು ನಾನು ಸಾಕ್ಷಿ ನುಡಿಯುವ ಮೊದಲು ಕೇಳಿ ತಿಳಿದುಕೊಂಡಿಲ್ಲ ಏಕೆಂದರೆ ಆ ವಿಷಯ ನಮಗೆ ಸಂಬಂಧಪಟ್ಟಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿಯವರ ವಂಶವೃಕ್ಷ ಪ್ರತಿವಾದಿಯರಿಗೆ ಸಂಬಂಧಪಡುವುದಿಲ್ಲ.

8. ವಾದಿಯರು ಸಲ್ಲಿಸಿರುವ ವಂಶವೃಕ್ಷದ ಬಗ್ಗೆ ನಮಗೆ ಯಾವುದೇ ತಕರಾರು ಇರುವುದಿಲ್ಲ. ದಾವಾ ಸ್ವತ್ತುಗಳು ಆಜು-ಬಾಜಿನಲ್ಲಿರುವ ಜಮೀನುಗಳು ಎಂದರೆ ಸರಿ. ದಾವಾ ಸ್ವತ್ತುಗಳ ಬಳಿ ನಾನು ಹೋಗಿದ್ದೆ.

ಇವತ್ತಿಗೂ ಕೂಡ ಹೋಗಿದ್ದೆ. ವಾದಿಯರು ಕಾನೂನು ಬಾಹಿರ ಬೋರ್ಡ್ ಹಾಕಿದ್ದಾರೆ ಎಂದು ಸಾಕ್ಷಿ ನುಡಿಯುತ್ತಾರೆ. ಷೆಡ್ ಕೂಡ ಹಾಕಿದ್ದು ಅಲ್ಲಿ ಯಾವುದೇ ಬೆಳೆ ಬೆಳೆಯುತ್ತಿಲ್ಲ.

9. ಈ ಹಂತದಲ್ಲಿ ಸಾಕ್ಷಿದಾರರಿಗೆ ಕೆಲವು ಭಾವಚಿತ್ರಗಳನ್ನು ತೋರಿಸಿ ಇವು ದಾವ ಸ್ವತ್ತುಗಳ ಭಾವಚಿತ್ರ ಎಂದರೆ ಹೀಗೆ ನೋಡಿದರೆ ಗೊತ್ತಾಗುವುದಿಲ್ಲ. ದಾವ ಸ್ವತ್ತುಗಳಲ್ಲಿ ಬೆಳೆ ಬೆಳೆದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಭಾವಚಿತ್ರಗಳು ದಿಃ 10.9.2018 ಹಾಗೂ 08.08.2018ರಲ್ಲಿ ತೆಗೆದ ಭಾವಚಿತ್ರಗಳಾಗಿರುತ್ತವೆ ಎಂದರೆ ನನಗೆ ಈ ರೀತಿ ನೋಡಿದರೆ ನನಗೆ ಗೊತ್ತಾಗುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

10. ದಾವಾ ಜಮೀನು ಸರ್ವೆ ನಂ.85/1 ರ ಜಮೀನಿನಲ್ಲಿ ನಮಗೆ ಹಕ್ಕಿಲ್ಲ ಎಂದರೆ ಸರಿಯಲ್ಲ. ಹಕ್ಕು ಇದೆ ಆದರೆ ಅದು ನಮಗೆ ಮಾರಾಟ ಮಾಡಿದ ನಾರಾಯಣಸ್ವಾಮಿ ಅವರ ಹೆಸರಿನಲ್ಲಿ ಇದೆ. ಸದರಿ ನಾರಾಯಣಸ್ವಾಮಿ ಅವರು 3ನೇ ಪ್ರತಿವಾದಿಯ ಸಂಬಂಧಕರಲ್ಲ. ಸರ್ವೆ ನಂ.88/1ರ ಜಮೀನನ್ನು ಖರೀದಿ ಮಾಡುವ ಸಮಯದಲ್ಲಿ ಕ್ರಯಪತ್ರದಲ್ಲಿ ನಾನು ಸಾಕ್ಷಿದಾರನಾಗಿ ಅಥವಾ ಜಿ ಪಿ ಎ ಆಗಿ ಕಾರ್ಯ ನಿರ್ವಹಿಸಿಲ್ಲ ಎಂದರೆ ಸರಿ.

11. ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಂತೆ 1980ರ ಹಿಂದಿನ ದಾಖಲಾತಿಗಳನ್ನು ನಾನು ನೋಡಿಲ್ಲ. ನಿಪಿ.6 ಮತ್ತು 7ರ ಸ್ಕೆಚ್ ಗೆ ಸಂಬಂಧಪಟ್ಟಂತೆ ನನ್ನ ಯಾವುದೇ ತಕರಾರು ಇರುವುದಿಲ್ಲ. 1980ರ ಖರೀದಿ ಮಾಡಿದ ಸಮಯಕ್ಕಿಂತ ಹಿಂದಿನ ದಾಖಲಾತಿಗಳನ್ನು ನಾನು ಪರಿಶೀಲನೆ ಮಾಡಿಲ್ಲ. ವಾದಪತ್ರದಲ್ಲಿ ಇರುವ ಸಂಪೂರ್ಣ ವಿಚಾರವನ್ನು ಓದಿ ತಿಳಿದುಕೊಂಡಿರುತ್ತೇನೆ. ನಾವು ನಾರಾಯಣಸ್ವಾಮಿ ಅವರಿಂದ ಜಮೀನು ಖರೀದಿಸುವ ಸಮಯದಲ್ಲಿ ಅವರ ಜಮೀನಿನ ಮೇಲಿರುವ ಟೈಟಲ್ ಬಗ್ಗೆ ವಿಚಾರಣೆ ಮಾಡಿಲ್ಲ. ಟೈಟಲ್ ಗೆ ಸಂಬಂಧಪಟ್ಟಂತೆ ಬೇರೆ ಯಾವುದೇ ಮಾಹಿತಿ ಕೂಡ ಪಡೆದುಕೊಂಡಿಲ್ಲ.

12. ಸರ್ವೆ ನಂ.88/1ರ ಕ್ರಯಪತ್ರವನ್ನು ನಾರಾಯಣ ಸ್ವಾಮಿ ಅವರು ಯಾವ ಆಧಾರದ ಮೇಲೆ ಪ್ರತಿವಾದಿಯರಿಗೆ ಬರೆದುಕೊಟ್ಟಿರುತ್ತಾರೆ ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪ್ರತಿವಾದಿಯರಿಂದ ದಾಖಲಾತಿಗಳನ್ನು ಕೇಳಿ ಪಡೆದಿಲ್ಲ. ಸದರಿ ಕ್ರಯಪತ್ರ ನೊಂದಣಿಯಾಗುವ ಸಮಯ ನಾನು ಇರಲಿಲ್ಲ ಎಂದರೆ ಸರಿ. ಆದ್ದರಿಂದ ನನಗೆ ಯಾವ ಆಧಾರದ ಮೇಲೆ ಕ್ರಯಪತ್ರಗಳನ್ನು ನಾರಾಯಣ ಸ್ವಾಮಿ ಅವರು ಬರೆದುಕೊಟ್ಟಿರುತ್ತಾರೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸರ್ವೆ

ನಂ.88/1 ಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಾಲಾತಿಗಳು ನಮ್ಮ ಬಳಿ ಇಲ್ಲ ಎಂದರೆ ಸರಿ. ಆದರೆ ಸದರಿ ದಾಖಲಾತಿಗಳು ನಾರಾಯಣ ಸ್ವಾಮಿ ಅವರ ಬಳಿ ಇದ್ದವು.

13. ಸರ್ವೇ ನಂ. 88/1ರ ಜಮೀನನ್ನು ನಾರಾಯಣಸ್ವಾಮಿ ಅವರ ಸಹೋದರನಾದ ಟಿ. ಕೃಷ್ಣ ಅವರು ಮಾರಾಟ ಮಾಡಿರುತ್ತಾರೆ. ಸದರಿ ಜಮೀನು ನಾರಾಯಣಸ್ವಾಮಿ ಅವರಿಂದ ಟಿ. ಕೃಷ್ಣ ಅವರಿಗೆ ಹೇಗೆ ಬಂತು ನನಗೆ ಗೊತ್ತಿಲ್ಲ. ಸದರಿ ಜಮೀನನ್ನು ಟಿ. ಕೃಷ್ಣ ಅವರ ಜಿ.ಪಿ.ಎ ಹೋಲ್ಡರ್ ಮಾರಾಟ ಮಾಡಿರುತ್ತಾರೆ. ಸದರಿ ಜಿ.ಪಿ.ಎ ಅವರ ಹೆಸರು ಆರ್.ರಾಮಸ್ವಾಮಿ ಎಂದರೆ ಸರಿ. ಆರ್.ರಾಮಸ್ವಾಮಿ ಈಗ ಜೀವಂತವಾಗಿಲ್ಲ. ಸದರಿ ರಾಮಸ್ವಾಮಿ ನಾನು ಸ್ನೇಹಿತರಲ್ಲ. 2 ರಿಂದ 6 ನೇ ಪ್ರತಿವಾದಿಗಳು ಹಾಗೂ ರಾಮಸ್ವಾಮಿ ಸಂಬಂಧಿಕರಾಗಿರುವುದಿಲ್ಲ.

14. ನಾರಾಯಣಸ್ವಾಮಿ ಅವರು ಸಹೋದರನಾದ ಟಿ. ಕೃಷ್ಣ ಅವರಿಗೆ ದಾವಾ ಜಮೀನನ್ನು ಬರೆದುಕೊಟ್ಟ ಬಗ್ಗೆ ಅಥವಾ ಸದರಿ ಜಮೀನು ಟಿ.ಕೃಷ್ಣ ಅವರ ಹೆಸರಿಗೆ ಬಂದ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಟಿ. ಕೃಷ್ಣ ಅವರು ರಾಮಸ್ವಾಮಿ ಅವರಿಗೆ ಬರೆದುಕೊಟ್ಟ ಜಿಪಿಎ ಅನ್ನು ಹಾಜರುಪಡಿಸಿಲ್ಲ. 1980 ರ ಕ್ರಯಪತ್ರದಲ್ಲಿ ಮುದಿನಂಜೇಗೌಡರ ಯಾರಾದರೂ ಒಬ್ಬ ವಂಶಸ್ಥರ ಸಹಿ ಪಡೆದಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮುದಿನಂಜೇಗೌಡರ ವಂಶಸ್ಥರ ಬಗ್ಗೆ ನನಗಾಗಲಿ ಪ್ರತಿವಾದಿಯರಿಗಾಗಲಿ ಮಾಹಿತಿ ಇರುವುದಿಲ್ಲ. 1980 ರ ವ್ಯವಹಾರದಲ್ಲಿ ನಾನು ವಯಕ್ತಿಕವಾಗಿ ಹಾಜರಿಲ್ಲದೆ ಇರುವುದರಿಂದ ನನಗೆ ಆ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ವಿಚಾರ ಗೊತ್ತಿಲ್ಲದೆ ಇದ್ದರು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

15. ನಿಪಿ.34 ರಲ್ಲಿ ಸರ್ವೇ ನಂ.88/1ರ ಚೆಕ್ಕುಬಂದಿಗೆ ಸಂಬಂಧಪಟ್ಟಂತೆ ಸರಿಯಾದ ವಿವರಣೆ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.35 ನೊಂದಾಯಿತ ಕ್ರಯಪತ್ರದ ದೃಢೀಕೃತ ನಕಲು ಎಂದರೆ ಸರಿ. ನಿಪಿ.35 ರ ಸಂಪೂರ್ಣ ವಿವರಗಳನ್ನು ನಾನು ಓದಿರುತ್ತೇನೆ. ನಿಪಿ.35 ರ 21 ನೇ ಪುಟದಲ್ಲಿ ನಮೂದು ಮಾಡಿರುವ ಒಕ್ಕಣೆಯಂತೆ ಕ್ರಯಪತ್ರ ನಮ್ಮ ಬಳಿ ಇರುವುದಿಲ್ಲ ಎಂದರೆ ಸರಿ . ಸರ್ವೇ ನಂ. 88/1 ಕ್ಕೆ ಸಂಬಂಧಪಟ್ಟಂತೆ ನಮ್ಮ ಕ್ರಯಪತ್ರ ಬಿಟ್ಟರೆ ನಮ್ಮ ಬಳಿ ಯಾವುದೇ ದಾಖಲಾತಿಗಳನ್ನು ಇರುವುದಿಲ್ಲ

16. ನಿಪಿ.35 ನೇ ಪುಟ ಸಂ.35 ರಲ್ಲಿ ಐಟಂ ನಂ.9 ಕ್ಕೆ ಸಂಬಂಧಪಟ್ಟಂತೆ ಸರ್ವೇ ನಂ.88/1 ಕ್ಕೆ ಇರುವಂತೆ ಚೆಕ್ಕುಬಂದಿ ಸರಿಯಾಗಿದೆ. ಸದರಿ ಚೆಕ್ಕುಬಂದಿಯಲ್ಲಿ ಪಶ್ಚಿಮ ಭಾಗಕ್ಕೆ ಸರ್ವೇ ನಂ.85 ಎಂದು ನಮೂದಿಸಿರುತ್ತಾರೆ ಎಂದರೆ ಸರಿ. ಸರ್ವೇ ನಂ.85/1 ಮತ್ತು 88/1 ರ ಜಮೀನುಗಳ ಚೆಕ್ಕುಬಂದಿ ಕಾಮನ್

ಆಗಿರುತ್ತವೆ ಹಾಗೂ ಅವುಗಳನ್ನು ಸುಲಭವಾಗಿ ಗುರುತಿಸಬಹುದು ಎಂದರೆ ಸರಿ. ಸದರಿ ಕಾಮನ್ ಬೌಂಡರಿಯನ್ನೇ ವಾದಪತ್ರದಲ್ಲಿ ಕೂಡ ವಾದಿಯರು ಸಲ್ಲಿಸಿರುತ್ತಾರೆ ಎಂದರೆ ಸರಿ.

17. ಸದರಿ ಜಮೀನುಗಳನ್ನು ಕನ್ವರ್ಷನ್ ಮಾಡಿಸಲು ನಾನು ಯಾವುದೇ ಸರಕಾರಿ ಕಛೇರಿಗಳಿಗೆ ಓಡಾಡಿರುವುದಿಲ್ಲ. 2012 ರಲ್ಲಿ 2,4,5, 6 ನೇ ಪ್ರತಿವಾದಿಗಳು 3 ನೇ ಪ್ರತಿವಾದಿ ಹೆಸರಿಗೆ ಜಿ ಪಿಎ ಮಾಡಿಸಿ ಸದರಿ ಜಮೀನುಗಳನ್ನು ಭೂಪರಿವರ್ತನೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಸಮಯದಲ್ಲಿ ಯಾವುದೇ ವಿಚಾರವನ್ನು ವಾದಿಗಳ ಗಮನಕ್ಕೆ ತಂದಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ 3 ನೇ ಪ್ರತಿವಾದಿಗೆ 45-46 ವರ್ಷ ವಯಸ್ಸಾಗಿತ್ತು. ಈಗಲೂ ಕೂಡ ಅವರು ಆರೋಗ್ಯವಾಗಿದ್ದಾರೆ ಎಂದರೆ ಸರಿಯಲ್ಲ. ಅವರು ನ್ಯಾಯಾಲಯಕ್ಕೆ ಬಂದು ಹೇಳಿಕೆ ನೀಡಿದರೆ ಅವರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲು ಮಾಡಬಹುದು ಎಂಬುದರಿಂದ ತಪ್ಪಿಸಿಕೊಳ್ಳಲು ಅವರು ನನಗೆ ಜಿ ಪಿ ಎ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

18. ಸರ್ವೇ ನಂ.88/1 ರ 2 ಎಕರೆ 6 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ನಿಪಿ.38 ರ ಪ್ರಕಾರ ರಿಜಿಸ್ಟರ್ ಲಭ್ಯವಿರುತ್ತದೆ ಆದರೆ ಎಮ್ ಆರ್ ನಂಬರ್ ದಾಖಲಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿಕೊಂಡು ವಾದಿಯರ ಬೆಲೆ ಬಾಳುವ ಜಮೀನುಗಳನ್ನು ಲಪಾಟಾಯಿಸುವ ಉದ್ದೇಶದಿಂದ 2 ರಿಂದ 6 ನೇ ಪ್ರತಿವಾದಿಯರು ಸುಳ್ಳು ಪತ್ರ ತಯಾರಿಸಿ ಜಮೀನು ನೊಂದಣಿ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

19. ದಾವಾ ಸ್ವತ್ತನ್ನು ಮಾರಾಟ ಮಾಡಲು ನಾರಾಯಣಸ್ವಾಮಿ ಅವರಿಗಾಗಲಿ ಅವರ ಸಹೋದರ ಟಿ ಕೃಷ್ಣ ಅವರಿಗಾಗಲಿ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ 2 ರಿಂದ 6 ನೇ ಪ್ರತಿವಾದಿಯರ ಹೆಸರಿಗೆ ದಾವಾ ಸ್ವತ್ತುಗಳ ದಾಖಲಾತಿಗಳು ಆಗಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಸದರಿ ವ್ಯವಹಾರ ವಾದಿಯ ಹಕ್ಕಿಗೆ ಬದ್ದಪಡಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ. 1958 ರಲ್ಲಿ ದಾವಾ ಜಮೀನುಗಳನ್ನು ವಾದಿಯ ತಂದೆ ನಾರಾಯಣಸ್ವಾಮಿ ಅವರಿಗೆ 1,000/- ರೂ.ಗಳಿಗೆ ಭೋಗ್ಯ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ ಇರಬಹುದು ಎಂದು ಸಾಕ್ಷಿ ನುಡಿಯುತ್ತಾರೆ. ನಿಪಿ.8 ರ ಪ್ರಕಾರ ಭೋಗ್ಯಕ್ಕೆ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ.9 ಎಮ್ ಆರ್ -1852/57-58 ರ ಪ್ರಕಾರ ಈ ಬಗ್ಗೆ ನಮೂದು ಆಗಿರುತ್ತದೆ ಎಂದರೆ ದಾಖಲಾತಿಗಳ ಪ್ರಕಾರ ಇದೆ ಎಂದು ಸಾಕ್ಷಿ ನುಡಿಯುತ್ತಾರೆ. ನಿಪಿ.10 ರ ಪ್ರಕಾರ ಸದರಿ ಭೋಗ್ಯವನ್ನು ತಿರುವಳಿ ಮಾಡಲಾಗಿರುತ್ತದೆ ಎಂದರೆ ಸರಿ. ಇದಾದ ನಂತರ ವಾದಿಯರು ಅವಿದ್ಯಾವಂತರಾದ್ದರಿಂದ ಪರಿಶೀಲನೆ ಮಾಡಿಲ್ಲ ಅದು ತಪ್ಪಾಗಿ ಆರ್ ಟಿ ಸಿಯಲ್ಲಿ ಮುಂದುವರಿದು ಬಂದಿರುತ್ತದೆ ಎಂದರೆ ಸರಿಯಲ್ಲ. ವಾದಿ ಹಾಗೂ ಅವರ ಕುಟುಂಬದವರು ಅವಿದ್ಯಾವಂತರು ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ ನಾರಾಯಣ

ಸ್ವಾಮಿ ಸಹೋದರ ಟಿ. ಕೃಷ್ಣ ಅವರ ಜೊತೆ ಸೇರಿಕೊಂಡು ದಾಖಲಾತಿಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸುಳ್ಳು. ಈ ವಿಚಾರ ವಾದಿಯರಿಗೆ ತಿಳಿದ ನಂತರ ಅವರು ಗಾಬರಿಗೊಂಡು ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

20. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿರುವ ಅಂಶಗಳು ಸುಳ್ಳಾಗಿದ್ದು ನನಗೆ ಯಾವುದೇ ವಿಷಯ ಗೊತ್ತಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ಬರೆಸಿಕೊಂಡಿರುವ ಕ್ರಯಪತ್ರಗಳು ಸುಳ್ಳಾಗಿದ್ದು ವಾದಿಯರ ಹಕ್ಕಿಗೆ ಬದ್ದಪಡಿಸುವುದಿಲ್ಲ ಎಂದರೆ ಸರಿಯಲ್ಲ. ದಾವ ಸ್ವತ್ತುಗಳು ವಾದಿಯರ ಪಿತ್ರಾರ್ಜಿತ ಆಸ್ತಿಗಳಾಗಿದ್ದು ಅದರಲ್ಲಿ ಅವರಿಗೆ ಹಕ್ಕು ಇದೆ ಎಂದರೆ ಸರಿಯಲ್ಲ. ವಾದಿಯರು ದಾವ ಸ್ವತ್ತುಗಳ ಜಂಟಿ ಸ್ವಾಧೀನ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ನನಗೆ ದಾವ ಸ್ವತ್ತುಗಳ ಯಾವ ವಿಚಾರ ಗೊತ್ತಿಲ್ಲದಿದ್ದರು ನನಗೆ ಜಿ ಪಿ ಎ ಅನ್ನು ಪ್ರತಿವಾದಿಗಳಿಂದ ಪಡೆದು ಸಾಕ್ಷಿ ನುಡಿಯಲು ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

21. ಸರ್ವೇ ನಂ. 88/1 ಮಾತ್ರ ಭೂಪರಿವರ್ತನೆ ಆಗಿರುತ್ತದೆ ಎಂದರೆ ಸರಿ ಸರ್ವೇ ನಂ.85/1 ಭೂಪರಿವರ್ತನೆ ಆಗಿರುವುದಿಲ್ಲ ಎಂದರೆ ಸರಿ. ಭೂಪರಿವರ್ತನೆ ಆದರೂ ಕೂಡ ಅದು ವಾದಿಯ ಹಕ್ಕಿಗೆ ಯಾವುದೇ ರೀತಿ ಚ್ಯುತಿ ಉಂಟಾಗುವುದಿಲ್ಲ ಎಂದರೆ ಸರಿಯಲ್ಲ. ದಾವ ಸ್ವತ್ತುಗಳು ಈಗಲೂ ಸಹ ವಾದಿಗಳು ಜಂಟಿಯಾಗಿ ವ್ಯವಸಾಯ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ ಎಂದರೆ ಸರಿಯಲ್ಲ. ದಾವ ಸ್ವತ್ತುಗಳು ಇವತ್ತಿಗೂ ಕೂಡ ವಾದಿಯರ ಅವಿಭಕ್ತ ಮತ್ತು ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.